*ಕ್ರಿಸ್ತು ಜಯಂತಿ ಕನ್ನಡ ಸಂಶೋಧನಾ ಪತ್ರಿಕೆ*
(Kristu Jayanti Kannada Sanshodhana Patrike)
*ಸಂಪುಟ 1, ಸಂಚಿಕೆ 1, ಮಾರ್ಚ್ 2022, ಪುಟಗಳು 25–34*

# ಸಮಾಜ ಚಿಕಿತ್ಸೆಯ ಕಥೆಗಾರ ಬೆಸಗರಹಳ್ಳಿ ರಾಮಣ್ಣ

**ಚಂದ್ರಶೇಖರ್. ಎನ್.**
*ಸಹಾಯಕ ಪ್ರಾಧ್ಯಾಪಕರು*
*ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ, ಬೆಂಗಳೂರು*
Email: chandrashekar.n@kristujayanti.com

ಕಥೆಯ ಮೂಲ ವೈಯಕ್ತಿಕ ಅನುಭವವಿರಬಹುದು, ಅವಲೋಕನದಿಂದಿರಬಹುದು ಅಥವಾ ಸಂಭಾಷಣೆಯ ರೂಪದಲ್ಲಿರಬಹುದು ಆದರೆ ಅವುಗಳ ವ್ಯವಸ್ಥಿತ ಜೋಡಣೆ, ಕಲಾತ್ಮಕತೆ, ಸಹ್ಯವಾದ ನಿರೂಪಣೆ ಪ್ರಧಾನವಾಗುತ್ತದೆ. ಸ್ವೀಕೃತಭಾವ, ಸಹೃದಯತೆ, ಸಹನೆ, ಕುತೂಹಲಕಾರಿ ಮನೋಭಾವನೆ ಹಾಗೂ ಸೃಜನಶೀಲತೆ ಉತ್ತಮ ಕಥೆಗಾರನ ಲಕ್ಷಣಗಳಾಗಿರಬೇಕು. ಕಥೆಗಳು ಭಾರತದ ಬಹುರೂಪಿ ಸಂಸ್ಕೃತಿಯನ್ನು ಪ್ರತಿನಿಧಿಸುವ ಹಾಗೂ ಪರಿವರ್ತನಶೀಲಗೊಳಿಸುವ ಗುಣವನ್ನು ಹೊಂದಿವೆ. ಕಥೆಗಾರ ಕಥೆಯನ್ನು ಹೇಗೆ ಬರೆಯುತ್ತಾನೆಂದು ಕೇಳಿದರೆ ಅದನ್ನು ವಿವರಿಸಲಾಗದು ಯಾಕೆಂದರೆ ಕಥೆಯ ವಸ್ತುಗಳು ವಿವಿಧ ಸನ್ನಿವೇಶ ಮತ್ತು ವಾತಾವರಣದ ಹಿನ್ನೆಲೆಯನ್ನು ಅವಲಂಭಿಸಿರುತ್ತವೆ. ಅಂತೆಯೇ ದೈನಂದಿನ ಬದುಕಿನಲ್ಲಿ ಸಾಂದ್ರಗೊಂಡ ಅನುಭವಗಳನ್ನು ಆರ್ದ್ರತೆಯೊಂದಿಗೆ ನಿರೂಪಣೆಗೊಳ್ಳುವ ಮೂಲಕ ಕಥೆ ತನ್ನ ವಿಸ್ತಾರವನ್ನು ಪಡೆದುಕೊಳ್ಳುತ್ತದೆ.

ಭಾರತೀಯ ಸಾಹಿತ್ಯದಲ್ಲಿ ಮೌಖಿಕ ಪರಂಪರೆಯ ಮಹತ್ವವನ್ನು ಕುರಿತು ನೋಡುವುದಾದರೆ ಅವು ವಿನೋದವನ್ನು, ಸೌಂದರ್ಯಾನುಭೂತಿಯನ್ನು ಉಂಟುಮಾಡುವ ಕತೆಗಳಾಗಿದ್ದವು. ಆದರೆ ಜನಪದ ಕತೆಗಳು ನಿರಕ್ಷರಸ್ಥ ಅಜ್ಜಿ ಕತೆಗಳಿಂದ ಮೊದಲ್ಗೊಂಡು ಆಡುಮಾತಿನ ಸಂಪ್ರದಾಯದಲ್ಲಿ ಸನ್ನಿವೇಶಕ್ಕನುಗುಣವಾದ ಕತೆ, ಉಪಕತೆ, ನೀಳ್ಗತೆಗಳಾಗಿ ಪ್ರಚುರಗೊಂಡವು. ಆದರೆ ಕೇಳುಗನಲ್ಲಿ ಆಲಿಸುವ ಕೌಶಲವನ್ನು ವೃದ್ಧಿಸಿ ರಸಾನುಭವವನ್ನುಂಟುಮಾಡುವಲ್ಲಿ ಇವು ಯಶಕಂಡಿವೆ. ಮುಂದುವರೆದು ಕತೆಗಳು ವಿವಿಧ ವರ್ಗೀಕರಣವನ್ನೊಳಗೊಂಡಿದ್ದು ಈ ಕೆಳಗಿನಂತೆ ಪೌರಾಣಿಕ ಕತೆಗಳು, ಸ್ತ್ರೀ–ಪುರುಷ ಕೇಂದ್ರಿತ ಕತೆಗಳು, ಕೌಟುಂಬಿಕ ಕತೆಗಳು, ವಿನೋದದ ಕತೆಗಳು, ದುರಂತ ಕತೆಗಳು, ದೈವ–ದೆವ್ವದ ಕತೆಗಳು ಹಾಗೂ ಪ್ರಾಣಿ ಕತೆಗಳನ್ನು ಉದಾಹರಿಸಬಹುದು ಹಾಗೂ ಕತೆಗಳನ್ನು ಕುರಿತ ಉಪಕತೆಗಳು ವಿಶೇಷವಾಗಿವೆ.

ಕತೆಗಳಿಗೆ ಮತ್ತು ಅಲ್ಲಿ ಬಳಕೆಯಾಗುವ ಪದಗಳಿಗೆ ಕೇವಲ ತೂಕ ಮಾತ್ರವಲ್ಲ ಒಂದು ಮನಸ್ಸಿದೆ ಅದರೊಳಗೆ ಹಲವು ಕನಸುಗಳಿವೆ, ಆದ ಕಾರಣ ಕತೆಗಾರನಿಗಿಂತಲೂ ಹೆಚ್ಚಿನ ಪ್ರಾಚೀನತೆ ಕತೆಗಳಿಗಿದೆ. ಕನ್ನಡ ಕಥಾಲೋಕ ಹಿರಿದು, ಆ ನಿಟ್ಟಿನಲ್ಲಿ ಸ್ವಾತಂತ್ರ್ಯಪೂರ್ವ ಕಾಲದ ಕತೆಗಾರ್ತಿ ಕೊಡಗಿನ ಗೌರಮ್ಮನಾದಿಯಾಗಿ ಹಲವರ ಕೊಡುಗೆ ಸ್ಮರಣೀಯ. ಮುಂದುವರೆದು ಆಧುನಿಕ ತಲೆಮಾರಿನ ಕಥಾಲೋಕಲ್ಲೊಂದು ಮೈಲಿಗಲ್ಲನ್ನು

ನೆಟ್ಟವರಲ್ಲೊಬ್ಬರಾದ ಬೆಸಗರಹಳ್ಳಿ ರಾಮಣ್ಣನವರು ವೃತ್ತಿಯಲ್ಲಿ ವೈದ್ಯರಾದರೂ ಶಾಲಾ ದಿನಗಳಿಂದಲೇ ಸಾಹಿತ್ಯಾಸಕ್ತಿಯನ್ನು ಹೊಂದಿದ್ದರು. ಬಸವ, ಗಾಂಧಿ, ಪೆರಿಯಾರ್, ಕುವೆಂಪು ವಿಚಾರಧಾರೆಗಳಿಂದ ಪ್ರಭಾವಿತರಾಗಿ ಸಾಮಾಜಿಕ ಅಸಮಾನತೆ, ಅನ್ಯಾಯಗಳ ವಿರುದ್ಧ ದನಿಯಾದವರು.

ವಿವಿಧ ಸಂಘಟನೆಗಳೊಂದಿಗೆ ತೊಡಗಿಸಿಕೊಂಡು ಹಳ್ಳಿಗಾಡಿನ ವೈದ್ಯರಾಗಿ ಮಾನವೀಯ ಸಂಬಂಧಗಳ ನಿಜ ನಿರೂಪಣೆಯನ್ನು ತಮ್ಮ ಕತೆಗಳಲ್ಲಿ ವ್ಯಕ್ತಪಡಿಸಿದವರು. ಜಾತಿಪದ್ಧತಿ, ಜಮೀನ್ದಾರಿ ಪದ್ದತಿ ಜೀತಪದ್ಧತಿ, ಅಸಮಾನತೆಗಳನ್ನು ಅಕ್ಷರದ ಮೂಲಕ ಪ್ರತಿಭಟಿಸಿದವರು. ರಾಮಣ್ಣನವರು ಸಮಾಜಕ್ಕಂಟಿದ ರೋಗಗಳನ್ನು ಪತ್ತೆಮಾಡಿ ಅವುಗಳಿಗೆ ತಮ್ಮ ಬರಹಗಳ ಮೂಲಕ ಉಪಚರಿಸಿದವರು. ಅವರಲ್ಲಿ ಅವಿರ್ಭವಿಸಿದ ಮಾನವೀಯ ಗುಣಗಳು, ಸಮಾನತೆಯ ದೃಷ್ಟಿ, ಜಾತ್ಯಾತೀತ ಪರಿಕಲ್ಪನೆಗಳು ಸಮಾಜ, ಸಮುದಾಯ ಮತ್ತು ಆಳುವ ವರ್ಗಗಳ ಕಣ್ಣು ತೆರೆಸುವಲ್ಲಿ ಮಹತ್ತರವಾದ ಪಾತ್ರ ವಹಿಸಿವೆ. ಗ್ರಾಮೀಣ ಭಾಗದ ಜನರ ನೋವು–ನಲಿವುಗಳನ್ನು ಕಣ್ಣಾರೆ ಕಂಡುಂಡು ರೈತಾಪಿ, ಶೋಷಿತ, ಅಶಕ್ತ ವರ್ಗಗಳ ಬಗೆಗಿನ ಅತೀವ ಕಾಳಜಿ ಅವರನ್ನೊಬ್ಬ ಕ್ರಾಂತಿಪುರುಷನನ್ನಾಗಿಸಿದ್ದಂತೂ ಪವಾಡವೇ ಸರಿ.

ತಮ್ಮ ಪ್ರತಿಯೊಂದು ಬರಹಗಳಲ್ಲೂ ವಾಸ್ತವತೆಯು ಮೇಳೈಸಿ ತಾಯ ಗರ್ಭದಲ್ಲಿನ ಕೂಸು ತನ್ನ ಕರುಳನ್ನು ತನ್ನ ಕೈಕಾಲುಗಳಿಗೆ ತಾನೇ ಸುತ್ತಿಕೊಂಡಂತೆ ಇವರ ಬರಹವು ಓದುಗರ ಬದುಕಿನೊಂದಿಗೆ ಬೆಸೆದುಕೊಂಡು ಅಲ್ಲಿ ಮೂಡಿ ಬಂದಿರುವ ಪಾತ್ರಗಳು ಜೀವಂತಿಕೆಯ ಭಾವವನ್ನು ಉದ್ದೀಪನಗೊಳಿಸುವುದಲ್ಲದೆ, ಎಚ್ಚರದ ಸ್ಥಿತಿಯೊಂದಿಗೆ ನಮ್ಮಲ್ಲಿನ ಅಂತಃಶಕ್ತಿಯನ್ನು ಹಾಗೂ ಸ್ವಾಭಿಮಾನವನ್ನು ಪುನರುಜ್ಜೀವನಗೊಳಿಸಲು ತಮ್ಮ ಬರಹಗಳುದ್ದಕ್ಕೂ ಶ್ರಮಿಸಿದ್ದಾರೆ. ಒಂದು ಕತೆಯು ಗೆಲ್ಲಬೇಕೆಂದರೆ ಅದನ್ನು ಓದುಗ ಸಹೃದಯಿ ತಾಂಬೂಲದಂತೆ ಮೆಲ್ಲಬೇಕು ತದನಂತರವೇ ತಿಂದದ್ದನ್ನು (ಓದಿದ್ದನ್ನು) ಜೀರ್ಣಿಸಿಕೊಳ್ಳಲು ಸಾಧ್ಯ, ಹಾಗೆಯೇ ಇವರ ಕತೆಗಳಲ್ಲಿನ ಪಾತ್ರಗಳು ನಮ್ಮ ನೆರಳಂತೆ ಬೆನ್ನುಬಿದ್ದಿವೆ.

ವೈದ್ಯ ವೃತ್ತಿಯೊಂದಿಗೆ ತನ್ನ ಕುಟುಂಬ, ಹಳ್ಳಿಯ ಬದುಕು ಮತ್ತು ಸಾಹಿತ್ಯ ಕೃಷಿಗಳಲ್ಲಿ ಉತ್ತಮ ಸಂಯೋಜನೆಯನ್ನು ಹೊಂದಿದ್ದವರು. ವ್ಯವಸ್ಥೆಯ ಒಳಗೂ ಹೊರಗೂ ಇದ್ದು ಪ್ರತಿಭಟಿಸುವ, ಸಂಘಟಿಸುವ ಜಾಣ್ಮೆ ಮತ್ತು ತಾಳ್ಮೆಯನ್ನು ಚಾತುರ್ಯಪೂರ್ಣವಾಗಿ ಸಂಭಾಳಿಸಿಕೊಂಡು ಬಂದವರು ರಾಮಣ್ಣ. ಅವರ ಅನುಭವದ ಮೂಸೆಯಲ್ಲಿ ಉದಿಸಿ ಬಂದ ಹಲವಾರು ಕಥೆಗಳಲ್ಲಿ ಕೆಲವನ್ನು ಮಾತ್ರ ನಾನಿಲ್ಲಿ ತಮ್ಮ ಅವಗಾಹನೆಗೆ ಇಟ್ಟಿದ್ದೇನೆ.

ರಾಮಣ್ಣನವರ 'ಜೀತ' ಕತೆಯ ಚಿಕ್ಕರಾಮ ಮತ್ತವನ ಅಣ್ಣ ಪುಟ್ಟಸ್ವಾಮಿಯ ಪಾತ್ರಗಳು ಈ ಅಸಮಾನ ವ್ಯವಸ್ಥೆಗಿಡಿದ ಕನ್ನಡಿಯಂತಿದೆ. ಯಜಮಾನನಿಂದ ಒದಗಿಬಂದ ಸ್ಥಿತಿಗೆ ಯಾರು ಕಾರಣರೆಂಬುದು ಪ್ರಶ್ನೆಯಾಗಿ ಕಾಡುತ್ತದೆ. ಹೌದು, ತನ್ನ ಬದುಕಿನ ಬಗೆಗೆ ಅಸಹ್ಯ ಉಂಟಾಗಿ ಪುಟ್ಟಸ್ವಾಮಿ ಹೀಗೆನ್ನುತ್ತಾನೆ 'ಥೂ ಈ ಮನುಷ್ಯ ಜನ್ಮವೇ ಬೇಡ ತಿರ್ಗ ಹುಟ್ಟಿದರೆ ಮರವಾಗೋ ಕಲ್ಲಾಗೋ ಮೂಗಬಸವನಾಗೋ ಹುಟ್ಟಬೇಕು ಏಳೇಳು ಜನುಮಕ್ಕು ಮನ್ಸನ ಜನ್ಮ ಬೇಡ' ಎಂದು ತಮ್ಮ ಸ್ಥಿತಿಯನ್ನು ಕಂಡು ಕಣ್ಣೀರಾಗುತ್ತಾರೆ ಅಂತೆಯೇ ಜೀತದಿಂದ ಮುಕ್ತಿ ಪಡೆದು ತನ್ನ ಹುಟ್ಟೂರಿಗೆ ಹೋಗೋಣವೆಂದರೆ ಅಲ್ಲಿನ ಸ್ಥಿತಿಯನ್ನು ಅರಿತು ದಿಕ್ಕುತೋಚದಂತಾಗಿ ಊರ ಮುಂದಿನ ದೇವಾಲಯದ ಬಳಿ ಕೈಚೆಲ್ಲಿ ಕೂರುವುದು ಅಂದಿನ ಉಳ್ಳವರ ದಬ್ಬಾಳಿಕೆಯನ್ನೂ ದಲಿತರ ಅಸಹಾಯಕತೆಯನ್ನೂ ತಿಳಿಸುತ್ತದೆ.

ಇವರ 'ಕಕರನ ಯುಗಾದಿ' ಎಂಬ ಕಥೆಯಲ್ಲಿ ಕುಟುಂಬ ನಿರ್ವಹಣೆಗೆ ಕಕರ ಪಡುವ ಪಾಡು, ಅಂತಹ ದಯನೀಯ ಸ್ಥಿತಿಯಲ್ಲಿ ಅವನು ಮಾಡುವ ಫಲವಿಲ್ಲದ ದುಡಿಮೆ ಮತ್ತೊಮ್ಮೆ ವ್ಯವಸ್ಥೆ ಎಸಗಿದ ಕ್ರೌರ್ಯವನ್ನು ಸೂಚಿಸುತ್ತದೆ. ಹಸಿವಿನಿಂದ ಸೊರಗಿದ ಕುಟುಂಬ, ತಿನ್ನಲು ಹಿಡಿ ಅನ್ನವಿಲ್ಲದಿದ್ದರೂ ಗೌಡನ ಮಗನ ಕೃಪೆಯಿಂದ ಹೊಟ್ಟೆ ತುಂಬಿಸಿಕೊಂಡು ಬಂದ ಮಗಳು ನಾಗಿ, ಅನ್ನಕ್ಕಾಗಿ ಪುಟ್ಟೇಗೌಡರ ಮನೆಯ ಬಳಿ ಕಾದು ಕುಳಿತ ದೇವರಸ 'ಅಪ್ಪೋ ನಂಗೆ ಹೇಳ್ದೆ ಉಣ್ಣೊಕೆ ಬಂದ್ಬುಟ್ಟಿದ್ದೀ' ಎಂದಾಗ ಕಕರ 'ಮನುಷ್ಯ ಜನ್ಮ ಎತ್ತದೆ ಕುರಿ, ಕೋಳಿ, ಮೇಕೆ ಆಗಿ ಹುಟ್ಟಿದರೆ ಸಾಕಿದವರು ಮಾರಿ ಯಾರೋ ಕುಯ್ದು ತಿಂದು  ಆನಂದಿಸೋರು, ಇಲ್ಲ ಹಾರಾಡೋ ಹಕ್ಕಿ ಆಗಿ ಹುಟ್ಟಿದ್ರೆ ಗಾಳೀಲಿ ತೇಲಾಡ್ತಾ ಹುಳ ಹುಪ್ಪಟೆ ತಿಂದು ಬದುಕಬಹುದು' ಎಂದು ತನ್ನನ್ನು ತಾನು ಶಪಿಸಿಕೊಳ್ಳುತ್ತಾನೆ.

ತನ್ನ ಹೆಂಡತಿ ಬಾವಿಗೆ ಹಾರಿದಾಗ 'ಜಾತಿ ಮನೆ ಹಾಳಾಯಿತು ಭಗವಂತನ ದೃಷ್ಟೀಲಿ ಎಲ್ಲ ಒಂದೇ' ಅವಳನ್ನು ಕಾಪಾಡೋ ಎಂದು ಜೋಯಿಸ ಬೊಬ್ಬೆಯಿಡುವಲ್ಲಿ ಹಾಗೂ ಅವಳನ್ನು ರಕ್ಷಿಸುವ ಕಾರ್ಯಾಚರಣೆಯಲ್ಲಿ ಕಕರ ಮೃತನಾದಾಗ ಅಲ್ಲಿನ ಶ್ಯಾನುಭೋಗ 'ನಿನ್ನ ಗಂಡ ಪುಣ್ಯ ಮಾಡಿದ್ದ ಬ್ರಾಹ್ಮಣರ ಹೆಂಗ್ಸನ್ನ ಬಚಾವ್ ಮಾಡೋಕೋಗಿ ಸಾಯೋದಂದ್ರೆ ಏನು? ಪವಿತ್ರವಾದ ಸಾವು ಇಂಥ ಸಾವು ಯಾರಿಗೂ ಬರೋಲ್ಲ' ಎಂದು ಕಕರನ ಹೆಂಡತಿ ಕೆಂಚಿಗೆ ಹೇಳುವಲ್ಲಿ ಸಾವಿಗೂ ಒಂದು ಸಾರ್ಥಕತೆಯನ್ನೊದಗಿಸುವ ನಿಟ್ಟಿನಲ್ಲಿ ಬಡವರ ಸಾವಿಗೆ ಬೆಲೆಯೇ ಇಲ್ಲದಂತಾಗಿಸುವ ಸಂದರ್ಭವಿಲ್ಲಿ ಅನಾವರಣಗೊಂಡಿದೆ. ಹೀಗೆ ಶೋಷಣೆಯ ವಿವಿಧ ಮುಖಗಳು ಎರಡೂ ಹೇಳಿಕೆಗಳಲ್ಲಿ ವ್ಯಕ್ತವಾಗಿದ್ದು, ತಮ್ಮ ಕಾರ್ಯಸಾಧನೆಗಾಗಿ ದಮನಿತರ ಶ್ರಮವನ್ನು ಬಂಡವಾಳವಾಗಿಸಿಕೊಂಡ ಮೇಲ್ವರ್ಗಗಳ ಮನಸ್ಥಿತಿಯನ್ನು ಸೂಚಿಸುತ್ತದೆ ಹಾಗೂ ಗೇಣು ಹೊಟ್ಟೆಗಾಗಿ ಎಂತಹ ತ್ಯಾಗಕ್ಕೂ ಸಿದ್ಧವಾಗಿದ್ದ ಬಡವರ ಪಾಡು ಹೇಳತೀರದ್ದಾಗಿದೆ.

ತಮ್ಮ 'ಹರಕೆಯ ಹಣ' ಎಂಬ ಕತೆಯಲ್ಲಿ ಹರಿಜನ ಮತ್ತು ಒಕ್ಕಲಿಗ ಸಮುದಾಯದವರೇ ಇರುವ ಊರಿನಲ್ಲಿ ಹರಿಜನರ ಜನಸಂಖ್ಯೆಯೇ ಹೆಚ್ಚಿದ್ದು (ಮಕ್ಕಳೇ ಆಸ್ತಿ ಎಂದು ನಂಬಿದ್ದ ಕಾರಣದಿಂದ) ಇಲ್ಲಿ ಮೂರು ಹೆಣ್ಣು ದೇವತೆಗಳು ನೆಲೆಸಿರುತ್ತವೆ. ಅದರಲ್ಲಿ ದಂಡಿಗನಮ್ಮ ಎಂಬುದು ಒಕ್ಕಲಿಗರ ದೇವ್ರು, ಮಾಸ್ತಮ್ಮ ಮತ್ತು ಹುಚ್ಚಮ್ಮ ಹೊಲೆಯರ ದೇವ್ರು, ಆದರೆ ಎಲ್ಲ ದೇವರಿಗೂ ಹರಿಜನರೇ ಪೂಜಾರಿಗಳು ಕಾರಣವೆಂದರೆ, ದೇವರನ್ನು ಮೆರೆಸುವ, ಕೆಂಡ ಹಾಯುವ ಸಾಹಸಮಯ ಕೆಲಸಗಳು ಇವರ ಪಾಲಿಗೇ ಬಂದದ್ದು.

ಒಮ್ಮೆ ಊರಲ್ಲಿ ಜಾತ್ರೆ ನಡೆದು ಅಲ್ಲಿ ಸಂಗ್ರಹವಾದ ಹರಕೆಯ ಹಣ ಯಾರಿಗೆ ಸೇರಬೇಕು ಎಂಬ ತಗಾದೆ ಬಂದು ನ್ಯಾಯ ತೀರ್ಮಾನಕ್ಕೆ ಶ್ಯಾನುಭೋಗರ ಮಧ್ಯಸ್ಥಿಕೆಯಾಗಲು ಇದಕ್ಕೆ ಒಪ್ಪದ ಪಟೇಲ ಪೂಜಾರಿ ಗರಿಕೆಯ ಹೆಂಡತಿ ಕೆಂಪಿ ಜೊತೆ ಅಕ್ರಮ ಸಂಬಂಧವಿರಿಸಿಕೊಂಡು ಆ ಮೂಲಕ ಈ ಹಣವನ್ನು ಲಪಟಾಯಿಸಲು ಮುಂದಾದಾಗ ಹರಿಜನ ಕೇರಿಯ ಪ್ರಗತಿಪರನಾದ ಸುಮಾನಿ ಪ್ರತಿರೋಧ ಒಡ್ಡುತ್ತಾನೆ. ಕೊನೆಗೆ ಹಣ ಸಮಪಾಲಾಗುತ್ತದೆ ಆದರಿಲ್ಲಿ ಜಾತಿ ವಿಷಯದಲ್ಲಿ ಸಾಮಾಜಿಕವಾಗಿ ಅಸ್ಪೃಶ್ಯತೆಯನ್ನು ಆಚರಿಸುವ ಮೇಲ್ಜಾತಿಗಳಿಗೆ ಅದೇ ಅಸ್ಪೃಶ್ಯ ಹೆಣ್ಣುಗಳೊಂದಿಗೆ ಸಂಬಂಧ ಸಾಧಿಸಲು ಯಾವುದೇ ಮೈಲಿಗೆಯಿಲ್ಲವೆಂದರೆ ಇದು ಮನುವಾದಿ ಮನಸ್ಥಿತಿಯ ಪ್ರತೀಕದಂತಿದೆ. ಇಲ್ಲಿ ಜೋಯಿಸನ ಆಸೆ, ಪಟೇಲನ ಮೋಸ, ಹರಿಜನರ ಸಂಘಟನೆ, ದೇವರುಗಳಲ್ಲಿನ ಜಾತೀಯ ವಿಭಾಗ ಕ್ರಮ ಹಾಗೂ ಅಕ್ರಮ ಸಂಬಂಧಗಳ ಚಿತ್ರಣವಿಲ್ಲಿ ಅನಾವರಣಗೊಂಡಿದೆ.

ಇನ್ನು 'ಗಾಂಧಿ' ಎಂಬ ಕಥೆಯಲ್ಲಿ ಕೇವಲ ಹೆಸರಿನ ಕಾರಣಕ್ಕಾಗಿ ನಗೆಪಾಟಲಿಗೀಡಾಗುವ ಬಾಲಕ ಮತ್ತವನ ಕುಟುಂಬದ ಚಿತ್ರಣವಿದೆ. ಬಡವರಿಗೆ ಆರೋಗ್ಯವು ಗಗನ ಕುಸುಮವಾಗಿರುವಾಗ ಸರ್ಕಾರಿ ಆಸ್ಪತ್ರೆಗಳ ಶೋಚನೀಯ ಸ್ಥಿತಿಯಿಲ್ಲಿ ಚಿತ್ರಿತಗೊಂಡಿದೆ. ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದ ಯುವಕನ ತಾತ ಗಾಂಧೀವಾದಿ ಕರಿಸಿದ್ದೇಗೌಡ ಶಿವಪುರಕ್ಕೆ ಗಾಂಧಿ ಭೇಟಿ ನೀಡಿದಾಗ ಕುದ್ದು ಅವರನ್ನು ನೋಡಿಬಂದು ಮೊಮ್ಮಗನಿಗೆ ಅದೇ ಹೆಸರನ್ನಿಡುತ್ತಾನೆ. ದುರಂತವೆಂದರೆ ಅವನ ಚಿಕಿತ್ಸೆಗಾಗಿ ಅವನ ತಾಯಿ ನಿಂಗಮ್ಮ ತನ್ನ ಕಿವಿಯೋಲೆಗಳನ್ನು ಅಡವಿಟ್ಟು ಹಣ ಹೊಂದಿಸುತ್ತಾಳೆ ಹಾಗೂ ತಾತ ಹೊಲದಲ್ಲಿದ್ದ ಹಲಸಿನಮರವನ್ನು ಮಾರಿ ಹಣ ಹೊಂದಿಸಿ ತರುವಷ್ಟರಲ್ಲಿ ಗಾಂಧಿ ಉಸಿರು ಚೆಲ್ಲಿರುತ್ತಾನೆ.

'ನಾನು ಸತ್ತರೆ ನನ್ನನ್ನು ನಮ್ಮ ಹಲಸಿನ ಮರದ ಬುಡದಲ್ಲೇ ಹಾಕಬೇಕು' ಎಂದ ಮೊಮ್ಮಗನ ಮಾತನ್ನು ನೆನೆದ ತಾತ, ಮಗಳು ದೊಡ್ಡಾಸ್ಪತ್ರೆಯ ಬಾಗಿಲ ಬಳಿ ನಿಂತು ಕಣ್ಣೀರಾಕುವುದನ್ನು ನೋಡಿ ಗಾಂಧಿ ಹೇಗಿದ್ದಾನೆ? ಎನ್ನುವ ಬದಲು ಯಾವಾಗ ಜೀವ ಹೋಯ್ತು? ಎಂದು ಕೇಳಿ ಮನುಷ್ರು ಸಾಯ್ದೆ ಕಲ್ಲು ಸತ್ತಾದೆ ಸುಮ್ಕಿರು ಮಂತೆ ಎಂದು ಹಣ್ಣಾದ ಜೀವ ಹೃದಯವನ್ನು ಕಲ್ಲಾಗಿಸಿಕೊಂಡು ಮಗಳನ್ನು ಸಂತೈಸುವಲ್ಲಿ ಮಾನವ

ಸಂಬಂಧಗಳ ಗಟ್ಟಿತನ ಹಾಗೂ ಬಡತನದ ಧಾರುಣ ಸ್ಥಿತಿ ತಂದೊಡ್ಡಿದ ಅನಾಹುತ ಕಲ್ಲೆದೆಯನ್ನೂ ಕರಗಿಸಿಬಿಡುತ್ತದೆ.

ಇನ್ನು 'ತಾಯಿ' ಪಾತ್ರವನ್ನು ಕುರಿತಂತೆ ರಚಿತವಾದ ಹಲವು ಸಾಹಿತ್ಯ ಪ್ರಕಾರಗಳನ್ನು ಕಂಡಿದ್ದೇವೆ ಅಂತೆಯೇ ಇಲ್ಲಿನ ತಾಯಿ ಕತೆಯೂ ಕೂಡಾ ಆ ಸ್ಥಾನಕ್ಕಿರುವ ಘನತೆಯನ್ನು ದುಪ್ಪಟ್ಟು ಮಾಡುವಂತಿದೆ. ಹೌದು ತ್ಯಾಗ, ಸಹನೆ, ಪ್ರೀತಿ, ಕರುಣೆಗಳು ತಾಯಿಯ ಒಡಲಾಳದ ಸಾವಿರದ ಸತ್ವಗಳು. ಆದರೆ ಬೆಸಗರಹಳ್ಳಿ ರಾಮಣ್ಣನವರ ಕತೆಯಲ್ಲಿನ ಈ ತಾಯಿ ಉರುಗಮ್ಮ ಸಮಾಜದ ಕಣ್ಣಾಗಿ ಮತ್ತೊಂದು ಕುಟುಂಬದ ಒಳಿತಿಗೆ ಉಸಿರು ಚೆಲ್ಲಿದ ಸಂದರ್ಭವಂತೂ ಎದೆಯಲ್ಲಿ ಕಂಪನವುಂಟಾಗುತ್ತದೆ. ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದ ಈ ತಾಯಿ ತನ್ನ ಓರಗೆಯ ಚೆನ್ನಮ್ಮನ ಜಮೀನನ್ನು ಕಬಳಿಸಲು ಯತ್ನಿಸಿದ್ದ ಶೆಟ್ಟಿ ೧೯೭೪ ರ ಟೆನೆನ್ಸಿ ಆಕ್ಟ್ ಪ್ರಕಾರ ಉಳುವವನದ್ದೇ ಭೂಮಿ ಎಂಬ ನೀತಿಯಡಿ ಸುಳ್ಳು ಸಾಕ್ಷಿ ತಯಾರಿಸಿದ್ದು, ಉರುಗಮ್ಮನ ಮಗ ಪುಟ್ಟರಾಜನೇ ಪಹಣಿ ಬರೆದಿದ್ದು ಲಂಚದಾಸೆಗೆ ಈ ಕೆಲಸ ಮಾಡಿದ್ದಾನೆಂದು ತಿಳಿದಾಗ ಆ ಒಣಗಿದ ಜೀವ ನೆಲಕಚ್ಚುತ್ತದೆ.

ಮಗನು ಮಾಡಿದ ಅನಾಚಾರಕ್ಕೆ ತಿಳಿಹೇಳಲು ಹೋಗಿ ಸೋಲುತ್ತಾಳೆ. ಏನಾದರೂ ಮಾಡಿ ಚೆನ್ನಮ್ಮನ ಮನೆಯನ್ನು ಕಾಪಾಡಬೇಕೆಂಬ ತಪನ ಉರುಗಮ್ಮನನ್ನು ಕಾಡದೆ ಬಿಡಲಿಲ್ಲ. ಹೀಗೆ ತನ್ನ ಅನಾರೋಗ್ಯದ ನಡುವೆಯೂ ಯೋಚಿಸಿ ಮಗ ಮತ್ತು ಸೊಸೆಯಿಂದ ಬೈಗುಳಗಳನ್ನು ಕೇಳುತ್ತಾಳೆ, ಹೀಗಿದ್ದರೂ ಧೃತಿಗೆಡದೆ ಮಹಜರಿಗೆಂದು ಎ.ಸಿ. ಸಾಹೇಬರು ಊರಿಗೆ ಬರುವುದನ್ನು ಖಾತ್ರಿಪಡಿಸಿಕೊಂಡು ನೇರವಾಗಿ ಅವರಿಗೇ ವಸ್ತುಸ್ಥಿತಿಯನ್ನು ನಿವೇದಿಸಿಕೊಳ್ಳಬೇಕೆಂದು ಗಟ್ಟಿ ನಿರ್ಧಾರಕ್ಕೆ ಬರುತ್ತಾಳೆ. ಅಂತೆಯೇ ಸಾಹೇಬರು ಬಂದಾಗ ಮಗನನ್ನೂ ಒಳಗೊಂಡಂತೆ ಇಡೀ ವಿರೋಧಿ ಬಣ ನೆರೆದಿರುವಾಗ ತನ್ನ ಕೈ ಕಾಲುಗಳನ್ನು ಕೀಳುತ್ತಾ ಅಧಿಕಾರಿಗಳ ಸಮಕ್ಷಮಕ್ಕೆ ಬಂದು ವಾಸ್ತವವನ್ನು ಬಿಚ್ಚಿಡುತ್ತಾಳೆ. ಆಗಲೂ ಮಗ ಪ್ರತಿರೋಧವೊಡ್ಡಿದಾಗ ಮಗನನ್ನು ಕುರಿತು 'ನಿನ್ನನ್ನ ಹೆರೋ ಬದಲು ಕಲ್ಲು ಗುಂಡನ್ನೋ ಕೊಳಕು ಮಂಡಲದ ಹಾವನ್ನೋ ಹೆರಬೇಕಾಗಿತ್ತು' ಎಂದು ಅಧಿಕಾರಿಗಳ ಬಳಿ ಅಳಲನ್ನು ತೋಡಿಕೊಂಡು ನ್ಯಾಯ ಕೇಳುತ್ತಾಳೆ.

ಆಗ ಸಾಹೇಬರು ಮಧ್ಯಪ್ರವೇಶಿಸಿ ಆಕೆಯ ಅಹವಾಲನ್ನು ಕೇಳಿ ಸತ್ಯಾಸತ್ಯತೆಯನ್ನು ಪರಾಮರ್ಶಿಸಿ ಆಕೆಯ ಮಗ ಪುಟ್ಟರಾಮನನ್ನು ಕರೆಸಿ ಕೇಳಲು ತಾನು ತಲೆ ತಗ್ಗಿಸಿ ನಿಲ್ಲುತ್ತಾನೆ. ಅಧಿಕಾರಿಯಿಂದ ತಾಯಿ ಸ್ಥಾನದ ಮಹತ್ವ ಅರಿತ ಪುಟ್ಟರಾಮ ಕಣ್ಣೀರಾಗುತ್ತಾನೆ, ಅಷ್ಟರಲ್ಲಿ ಜನರೆಲ್ಲಾ ನೋಡ ನೋಡುತ್ತಿದ್ದಂತೆ ಉರುಗಮ್ಮ ಕುಸಿದು ಬಿದ್ದು ಉಸಿರು ಚೆಲ್ಲುತ್ತಾಳೆ. ಅಲ್ಲೇ ಇದ್ದ ಚೆನ್ನಮ್ಮ ಓಡಿ ಬಂದು ಇವತ್ತು ನಮ್ಮವ್ವ ಸತ್ತೋದ್ಲು ಎಂದು ಗೋಳಾಡುತ್ತಾಳೆ. ಪರರ ಸುಖವನ್ನು ಬಯಸಿ ಆ ಹಿರಿಜೀವ ನಡೆಸಿದ ಹೋರಾಟ ನೆರೆದವರನ್ನು ಮೌನಿಗಳನ್ನಾಗಿಸುತ್ತದೆ. ತಾಯಿಯ

ಪಾತ್ರ ಪ್ರತಿ ಜೀವಿಯ ಸೃಷ್ಟಿಗೂ ಮೂಲ, ಆದರೆ ಅವಳಲ್ಲಿನ ಪರೋಪಕಾರಿ ಮನೋಭಾವನೆ ಇತರರಿಗೆ ಗುಣಪಾಠವಾಗಿದ್ದು ರಾಮಣ್ಣನವರ ಕತೆಗಳಲ್ಲಿ ನೈಜ್ಯವಾಗಿ ಮೂಡಿಬಂದಿದೆ.

ರಾಮಣ್ಣನವರ 'ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು' ಎಂಬ ಕಥೆಯಂತೂ ವರ್ತಮಾನದ ಭಾರತದ ನಿಜರೂಪವನ್ನು ಕಟ್ಟಿಕೊಡುತ್ತದೆ. ಕೋತಿ ಆಡಿಸುವ ಮಂಚನನ್ನು ಮತ್ತು ಅವನ ಮೂರು ಕೋತಿಗಳನ್ನು ಮೀಸಾ ಕಾಯ್ದೆಯಡಿ ಬಂಧಿಸಿ ಸ್ಟೇಷನ್ನಿಗೆ ಕರೆತಂದ ಪೊಲೀಸರಿಗೆ ಕೋತಿಗಳು ಕಲಿಸಿದ ನೀತಿ ಗಾಂಧೀತತ್ವವಾದ ಕೆಟ್ಟದ್ದನ್ನು ಕೇಳಬಾರದು, ನೋಡಬಾರದು, ಆಡಬಾರದು ಎಂಬ ಗುಣಪಾಠದಂತಿದೆ. ೧೯೭೫ರಲ್ಲಿ ಭಾರತ ಸರ್ಕಾರ ಜಾರಿಗೆ ತಂದ ಕಾಯ್ದೆಯು ಅಂದಿನ ರಾಜಕೀಯ ತುರ್ತನ್ನು ತಿಳಿಸುತ್ತದೆಯಾದರೂ ಹೊಟ್ಟೆಪಾಡಿಗಾಗಿ ಮಂಗಗಳನ್ನು ಆಡಿಸುತ್ತಾ ಜೀವನ ಸಾಗಿಸುತ್ತಿದ್ದ ಮಂಚ ಕಂಬಿ ಹಿಂದೆ ಕೂರಬೇಕಾಗಿ ಬಂದದ್ದರ ಹಿಂದೆ ನಮ್ಮನ್ನಾಳುವ ಸರ್ಕಾರಗಳ ಸೋಲಿದೆ. ಹೌದು, ವಿನಾ ಕಾರಣ ಶಿಕ್ಷಣದಿಂದ ವಂಚಿತರಾದ ಸಮುದಾಯಗಳು ಅಸಂಘಟಿತರಾಗಿ ಬದುಕನ್ನು ನಡೆಸುತ್ತಾ ಸಾಮಾಜಿಕ ಸ್ಥಾನಮಾನಗಳಿಂದ ದೂರವಾಗಿ ಜೀವನ ನಿರ್ವಹಣೆಗೆ ಹರಸಾಹಸಪಡುತ್ತಿರುವುದು ಇಂದಿಗೂ ಜ್ವಲಂತ ಸಮಸ್ಯೆಯಾಗಿದೆ.

ಇಪ್ಪತ್ತೊಂದನೇ ಶತಮಾನದಲ್ಲೂ ಮೂಲಭೂತ ಸೌಕರ್ಯಗಳಿಲ್ಲದೆ ಅಸಂಖ್ಯ ಸಮುದಾಯಗಳು ಹೋರಾಟದ ಜೀವನ ನಡೆಸುತ್ತಿದ್ದಾರೆ. ಸ್ವಾತಂತ್ರ್ಯಾನಂತರದ ಪಂಚವಾರ್ಷಿಕ ಯೋಜನೆಗಳು ಕೇವಲ ತಮ್ಮ ಅಂದಾಜುವೆಚ್ಚದ ಅಂಕಿ ಅಂಶಗಳನ್ನು ಹಿಗ್ಗಿಸಿಕೊಳ್ಳುತ್ತಿವೆಯೇ ಹೊರತು ಜನರ ಬದುಕನ್ನು ಹಸನಾಗಿಸಲಿಲ್ಲ. ಇನ್ನು ವಿಶ್ವಸಂಸ್ಥೆಯು ಸುಸ್ಥಿರ ಅಭಿವೃದ್ಧಿಗಾಗಿ ಸುಮಾರು ಹದಿನೇಳು ಗುರಿಗಳನ್ನು ನಿರ್ಧರಿಸಿದ್ದು ೨೦೩೦ರೊಳಗೆ ಸಾಧಿಸುವ ಪ್ರಯತ್ನದಲ್ಲಿದ್ದು, ಅವುಗಳಲ್ಲಿ ಇಂದಿಗೂ ಬಡತನ ನಿವಾರಣೆಯೇ ಆದ್ಯ ಗುರಿಯಾಗಿದೆ. ಉಳಿದಂತೆ ಆಹಾರ, ಆರೋಗ್ಯ ಮತ್ತು ಶಿಕ್ಷಣವೆಂಬ ಇತರೆ ಅಂಶಗಳು ಪ್ರಧಾನವಾಗಿವೆ.

ಮುಂದುವರೆದು ಮಂಚನನ್ನು ವಿಚಾರಿಸಿದ ಠಾಣಾಧಿಕಾರಿ ಅವನು ಮಾಡಿದ ಅಪರಾಧದ ಸ್ವರೂಪವನ್ನು ತಿಳಿಸುವಾಗ ಮಂಚ ಹೇಳುತ್ತಾನೆ ಸಾರ್, ನಾನು ಮಾಡಿದ ಅಪರಾಧವಾದರೂ ಏನು? ನಾನೇನು ಕೋಟಾ ನೋಟು ಮುದ್ರಿಸಿದ್ದೇನಾ, ಯಾರಿಗಾದರೂ ವಂಚನೆ ಮಾಡಿದ್ದೇನಾ ಅಥವಾ ಅಕ್ರಮ ಆಸ್ತಿ ಮಾಡಿದ್ದೇನಾ ಎಂದಾಗ ಅಧಿಕಾರಿ ನಖಶಿಖಾಂತ ಉರಿದುಕೊಂಡು ಅವನನ್ನು ಹೊಡೆಯಲು ಮುಂದಾದಾಗ ಕೋತಿಗಳು ಪ್ರತಿರೋಧ ವ್ಯಕ್ತಪಡಿಸುತ್ತವೆ. ಆದರೂ ಅವನನ್ನು ಮೂರು ದಿನಗ ಕಾಲ ಬಂಧನದಲ್ಲಿರಿಸಿದಾಗ ಸ್ಟೇಷನ್ನಿನ ಮುಂದೆ ಕುಳಿತು ಮಂಗಗಳು ಮೌನ ಪ್ರತಿಭಟನೆ ಮಾಡುತ್ತವೆ.

ಸ್ವಾತಂತ್ರ್ಯಕ್ಕಾಗಿ ಅಂದು ಗಾಂಧಿ ಅನುಸರಿಸಿದ ಸತ್ಯ ಮತ್ತು ಅಹಿಂಸೆಯ ಮಾರ್ಗವನ್ನೇ ಇಲ್ಲಿ ಮಂಗಗಳು ಪಾಲಿಸುತ್ತವೆ. ಉಳ್ಳವರ ಸರಕಾಗಿರುವ ಕಾನೂನು ಮತ್ತು ಆಡಳಿತವ್ಯವಸ್ಥೆ ದನಿಯಿಲ್ಲದವರ ಬಗೆಗೆ ತೋರುವ ಕಾಳಜಿ ಎಂತಹುದೆಂಬುದು ವೇದ್ಯವಾಗುತ್ತದೆ. ಕೊನೆಗೆ ತಮ್ಮ ಯಜಮಾನನ ಬರುವಿಕೆಗಾಗಿ ಕಾಯುತ್ತಾ ಕುಳಿತ ಮಂಗಗಳು ಅಹಾರವಿಲ್ಲದೆ ಸೊರಗಿ ನೆಲಕಚ್ಚಿದ್ದನ್ನು ಕಂಡು ಪೊಲೀಸರು ಎಚ್ಚರಿಸ ಹೋದಾಗ ಅವು ಅಸುನೀಗಿರುತ್ತವೆ. ಆ ದೃಶ್ಯವನ್ನು ಕಂಡ ಅಧಿಕಾರಿಗಳಿಗೆ ಮಾತಿಲ್ಲದಂತಾಗುತ್ತದೆ. ಪ್ರಾಣಿಗಳಿಗಿರುವ ವಿವೇಚನೆ ಮತ್ತು ಸ್ವಾಭಿಮಾನ ಬುದ್ಧಿವಂತ ಮನುಷ್ಯನಿಗಿಲ್ಲದಿರುವುದು ಮಹಾಪಾತಕವೇ ಸರಿ, ಮಂಚನಲ್ಲಿನ ದೇಶಪ್ರೇಮ ಅಧಿಕಾರಸ್ಥರಿಗೆ ಬಿಸಿ ತುಪ್ಪದಂತಾಗುತ್ತದೆ ಅಲ್ಲದೆ ಈ ಸುದ್ದಿ ಎಲ್ಲೆಡೆ ಹಬ್ಬಿ ಅಸುನೀಗಿದ ಮಂಗಗಳನ್ನು ಕಂಡು ಜನ ಮಮ್ಮಲ ಮರುಗುತ್ತಾರೆ.

'ಚೆಲುವನ ಪರಂಗಿ ಗಿಡಗಳು' ಎಂಬ ಕಥೆ ಮತ್ತೊಂದು ಆಯಾಮದಲ್ಲಿ ಓದುಗರನ್ನು ಹಿಡಿದಿಡುವಂತಿದ್ದು, ಇಲ್ಲಿ ಮೂಡಿ ಬಂದಿರುವ ಪಾತ್ರಗಳು ಸದಾ ಜೀವಂತಿಕೆಯೊಂದೆಗೆ ನಮ್ಮೊಂದಿಗೆ ಜೀವಿಸುತ್ತವೆ. ಸುಣ್ಣದಹಳ್ಳಿ ಎಂಬ ಊರಿನ ಸರ್ಕಾರಿ ಶಾಲೆಯಲ್ಲಿ ಪೌಷ್ಟಿಕಾಂಶ ಯೋಜನೆಯ ದಿನಾಚರಣೆ ಹಮ್ಮಿಕೊಂಡಾಗ ಅದರ ಜವಾಬ್ದಾರಿಯನ್ನು ಅಲ್ಲಿನ ಎಸ್.ಡಿ. ಎಮ್.ಸಿ. ಅಧ್ಯಕ್ಷನಾದ ಗೋವಿಂದಸ್ವಾಮಿಯೇ ವಹಿಸಿಕೊಳ್ಳುತ್ತಾನೆ. ಈ ಯೋಜನೆಯಡಿ ಆಯ್ಕೆಯಾದ ಶಾಲೆಗೆ ಸಕಾರದಿಂದ ಉಚಿತ ಬಾವಿ, ಪಂಪ್‌ಸೆಟ್, ವಿದ್ಯುತ್ ಸರಬರಾಜು ದೊರೆಯುತ್ತದೆ. ಊರಿನ ಜಮೀನ್ದಾರನಾದ ಇವನ್ನು ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಾನೆ. ಅಂತೆಯೇ ಶಾಲೆಗೆ ಬೇಲಿಯನ್ನು ಹಾಕಿಸದೆ ಆವರಣದ ಗಿಡಗಳೆಲ್ಲಾ ಹಾಳಾಗುವಂತೆ ಮಾಡುತ್ತಾನೆ.

ಈತನ್ಮಧ್ಯೆ ಭಾರತದಲ್ಲಿ ಅಪೌಷ್ಟಿಕತೆಯಿಂದ ಸಾಯುವ ಮಕ್ಕಳ ಸಂಖ್ಯೆಯು ಹೆಚ್ಚಾಗಿದ್ದು ಅದರಿಂದಾಗುವ ಅನಾಹುತಗಳ ಕುರಿತು ಭಾಷಣ ಹಾಗೂ ಭಿತ್ತಪತ್ರಗಳಿಂದ ಇದರ ತೀವ್ರ ಸಮಸ್ಯೆಯನ್ನರಿತ ಬಾಲಕ, ಹೊಲೆಯರ ಮೂಗೂರ ಮತ್ತು ಕಲ್ಲಕ್ಕ ದಂಪತಿಗಳ ಮಗ ಚೆಲುವ ಪ್ರತಿಭಾವಂತ ಹುಡುಗ ಸಮಸ್ಯೆಯ ವಿರುದ್ದ ಸಮರ ಸಾರಿ ಪರಂಗಿ ಗಿಡಗಳನ್ನು ಬೆಳೆದು ಅಪೌಷ್ಟಿಕತೆಯನ್ನು ನಿವಾರಿಸಲು ಸಜ್ಜಾಗುತ್ತಾನೆ. ಅದಕ್ಕಾಗಿ ಅಣ್ಣೂರಿನ ತೋಟಗಾರಿಕೆ ಅಧಿಕಾರಿ ಸುಬ್ಬಣ್ಣನವರ ನೆರವಿನಿಂದ ಗಿಡಗಳನ್ನು ಬೆಳೆಸಲು ಪ್ರೇರಿತನಾಗುತ್ತಾನೆ.

ಇಸ್ರೇಲ್ ದೇಶದಲ್ಲಿ ಒಂದೇ ದಿನ ಅಲ್ಲಿನ ಶಾಲಾ ಮಕ್ಕಳು ೦೭ಲಕ್ಷ ಸಸಿಗಳನ್ನು ನೆಟ್ಟಿದ್ದು, ಯಾರಾದರೂ ಸತ್ತರೆ ಅವರ ನೆನಪಿಗೊಂದು ಸಸಿ ನೆಡುವ ಕಾರ್ಯವನ್ನು ಮಾಡಿದ್ದರ ಬಗ್ಗೆ ತಿಳಿದುಕೊಂಡು ತನ್ನ ಮನೆಯ ಸುತ್ತಾ ಹಾಗೂ ಬರಡು ನೆಲದಲ್ಲಿ ಪರಂಗಿ ಗಿಡಗಳನ್ನು ನೆಡಲು ತೀರ್ಮಾನಿಸುತ್ತಾನೆ. ತನ್ನ ಈ ಕಾರ್ಯಕ್ಕೆ ತಾಯಿ ಕಲ್ಲಕ್ಕನೂ ನೆರವಾಗುತ್ತಾಳೆ. ಅದಕ್ಕಾಗಿಯೇ ಸಾವಯವ ಗೊಬ್ಬರವನ್ನು ತಯಾರಿಸಿ ಗಿಡಗಳಿಗೆ ನೀಡಿ ದೂರದ

ನಾಲೆಯಿಂದ ನೀರು ತಂದು ಮಕ್ಕಳಂತೆ ಸಾಕಿದರು. ಅಂತೆಯೇ ಕೋಳಿ ಸಾಕಾಣಿಕೆ ಮಾಡಿ ಅದರ ಮೊಟ್ಟೆಯಿಂದ ಅಪೌಷ್ಟಿಕತೆ ನಿವಾರಿಸಿ ಸಧೃಡ ಭಾರತವನ್ನು ಕಟ್ಟಬೇಕೆಂಬ ಕನಸು ಕಾಣುತ್ತಾನೆ ಚೆಲುವ.

ಇತ್ತ ಗೋವಿಂದಸ್ವಾಮಿಯಿಂದ ಬಂಜರು ಭೂಮಿಯನ್ನು ಗೇಣಿಗೆ ಪಡೆದು ಅದನ್ನು ಫಲವತ್ತಾಗಿಸಿ ಬೆಳೆದ ಬೆಳೆಯಲ್ಲಿ ಮೂಗೂರ ಮತ್ತು ಕಲ್ಲಕ್ಕ ದಂಪತಿಗಳಿಗೆ ಮಾಲೀಕ ಒಂದು ಕಾಳೂ ಸಿಗದಂತೆ ಮಾಡಿದ್ದಲ್ಲದೆ ಅಧಿಕಾರಿಗಳೂ ಅವನೊಂದಿಗೆ ಶಾಮೀಲಾಗಿ ಮೂಗೂರನ ಮೇಲೆಯೇ ದಾವೆ ಹೂಡಿದರು. ಧೃತಿಗೆಡದ ಮೂಗೂರ ಬಡವರ ಶ್ರಮವನ್ನು ತಿಂದು ತೇಗಿದ ಜಮೀನ್ದಾರನ ವಿರುದ್ಧ ತಾನು ಮತ್ತವನ ಸಮುದಾಯದವರು ಪ್ರತಿಭಟಿಸುತ್ತಾರೆ. ಆದರೆ ಇದನ್ನು ಸಹಿಸದ ಜಮೀನ್ದಾರನು ತಮ್ಮ ಹಿಂಬಾಲಕರನ್ನು ಛೂ ಬಿಟ್ಟು ಪರಂಗಿ ಫಸಲನ್ನು ಕದಿಯಲೆತ್ನಿಸಿದಾಗ ಇದ ತಿಳಿದ ಮೂಗೂರ ಉಗ್ರನಾಗುತ್ತಾನೆ. ದೇಶಪ್ರೇಮದಿಂದ ತನ್ನ ಮಗ ಮಾಡಿದ ಪರಿಶ್ರಮಕ್ಕೆ ಬೆಲೆಯಿಲ್ಲದಂತಾಗುತ್ತದೆ ಎಂಬುದನ್ನು ಅರಿತು ವಿರೋಧಿಸಿದಾಗ ಜಾತಿನಿಂದನೆಗೆ ಒಳಗಾಗುತ್ತಾನೆ ಹಾಗೂ ತನ್ನವರಿಗೆ ತಲತಲಾಂತರಗಳಿಂದಾದ ಅನ್ಯಾಯವನ್ನು ಹೊರಹಾಕುತ್ತಾನೆ.

ತನ್ನ ಪ್ರಾಮಾಣಿಕತೆಗೆ ಸಂದ ಅಪಜಯದಿಂದ 'ಈ ನರಜನ್ಮ ಎತ್ತೋದಕ್ಕಿಂತ ಒಂದು ಕೋತಿಯಾಗಿ ಹುಟ್ಟಿದ್ರೆ ಯಾರ ತೋಟಕ್ಕೆ ಬೇಕಾದ್ರು ನುಗ್ಗಿ ಆಹಾರ ತಿನ್ನಬೋದಿತ್ತು ಹಾಗೂ ಒಂದು ವೇಳೆ ಸತ್ತೋದರೂ ಹನುಮಂತನ ದೇವಸ್ಥಾನ ಕಟ್ಟಿ ಗೌರವಯುತವಾಗಿ ಕಾಣ್ತಾ ಇದ್ರು' ಎಂದು ಕೊನೆಗೆ ತನಗೆ ಸೋಲಾಗುವುದನ್ನು ಕಂಡು ನೋವಿನಿಂದ ತಾವು ಸಾಕಿದ ಗಿಡಗಳನ್ನು ತಾನೇ ಕತ್ತರಿಸಿದಾಗ ಚೆಲುವ ಅಡ್ಡ ಬರಲು ಅವನನ್ನು ಪಕ್ಕಕ್ಕೆ ನೂಕಲ್ಪಟ್ಟು ತಲೆಗೆ ಪೆಟ್ಟಾದದ್ದು ಕಂಡು ಮೂಗೂರ ಮತ್ತವನ ಕೇರಿಯವರು ಸಂಘಟಿತರಾಗಿ ಗೋವಿಂದಸ್ವಾಮಿಯ ಮೇಲೆರಗಲು ಪರಿಸ್ಥಿತಿ ಅರಿತ ಜಮೀನ್ದಾರ ತೆಪ್ಪಗಾದಾಗ ಮೂಗೂರನಿಗೆ ನ್ಯಾಯ ಸಿಕ್ಕುತ್ತದೆ. ಸುಬ್ಬಣ್ಣನಂತಹ ಪ್ರಾಮಾಣಿಕನ ನೆರವಿನಿಂದ ಮತ್ತಷ್ಟು ಗಿಡಗಳನ್ನು ನೆಟ್ಟು ಚೆಲುವ ಎಲ್ಲರ ಮೆಚ್ಚುಗೆಗೆ ಪಾತ್ರನಾಗುತ್ತಾನೆ.

ಮೇಲಿನ ಕತೆಗಳನ್ನು ಅವಲೋಕಿಸಿದಾಗ ಎಲ್ಲಾ ಕತೆಗಳಲ್ಲಿ ಸಾಮಾನ್ಯವಾಗಿ ಗೋಚರಿಸುವ ಅಂಶವೆಂದರೆ ಶ್ರಮಿಕರಾದ ಹರಿಜನ ಸಮುದಾಯದ ಬದುಕಿನ ಬವಣೆಗಳು, ಅವರಿಗೆ ಪ್ರಾಪ್ತವಾಗಿರುವ ಸಾಮಾಜಿಕ ಸ್ಥಾನಮಾನಗಳ ಬಗ್ಗೆ ಬೆಳಕು ಚೆಲ್ಲುತ್ತಾರೆ ಬೆಸಗರಹಳ್ಳಿ ರಾಮಣ್ಣನವರು. ಈ ನೆಲದ ಆದಿಮೂಲ ಸಂಸ್ಕೃತಿಯ ಪೋಷಕರಾದ ಹರಿಜನ ಸಮುದಾಯಗಳು, ಹಳ್ಳಿಯ ರೈತಾಪಿವರ್ಗ, ಬಡ ಮಹಿಳೆಯರು, ಮಕ್ಕಳು ಅವರ ಕತೆಯ ವಸ್ತುಗಳಾಗಿದ್ದು ತನ್ಮೂಲಕ ಅವರನ್ನು ಸ್ವಾಭಿಮಾನದ ಪ್ರತೀಕವಾಗಿಸಿದ್ದಾರೆ. ಅಂತೆಯೇ ಪ್ರತಿಯೊಂದು ಕತೆಯಲ್ಲೂ ಬಡತನ, ಹಸಿವು, ಅವಮಾನ, ಸಂಕಟ, ಅಸಹನೆ, ಸಿಟ್ಟು, ಪ್ರತಿಭಟನೆಗಳು ಸಹಜವಾಗಿದ್ದು ಈ ಎಲ್ಲಾ

ಸ್ಥಿತಿಗಳನ್ನು ಅನುಭವಿಸಿದ ಸಮುದಾಯಕ್ಕೆ ತನ್ನ ಬದುಕಿನ ಬಗ್ಗೆ ಮೂಡುವ ಅಸಹ್ಯಭಾವ ಪ್ರತಿಹಂತದಲ್ಲೂ ಮನುಷ್ಯ ಜನ್ಮವೆತ್ತಿದ್ದಕ್ಕೆ ಸ್ವತಃ ತಮ್ಮನ್ನು ತಾವೇ ಶಪಿಸಿಕೊಳ್ಳುವುದು ಮನುಕುಲದ ಮಹಾ ಪಾತಕವೇ ಸರಿ.

ತಮ್ಮ ಸಾಹಿತ್ಯ ಕೃಷಿ ಹಾಗೂ ವೃತ್ತಿಜೀವನದ ಸಂದರ್ಭದಲ್ಲೂ ಇಂತಹ ಜಾತೀಯತೆ, ಅಸಮಾನತೆ, ಜಮೀನ್ದಾರಿ ಪದ್ಧತಿಗಳ ವಿರುದ್ಧ ಹೋರಾಡುತ್ತಲೇ ಬಂದವರು ರಾಮಣ್ಣ. ಕನ್ನಡ ಸಾಹಿತ್ಯ ಲೋಕದ ಜನಕವಿ ನಾಡೋಜ ಸಿದ್ದಲಿಂಗಯ್ಯನವರು ಹಾಗೂ ಎಲ್. ಹನುಮಂತಯ್ಯನವರನ್ನು ಒಳಗೊಂಡಂತೆ ಅಸಂಖ್ಯ ಬರಹಗಾರರು, ಹೋರಾಟಗಾರರಿಗೆ ಬೆನ್ನೆಲುಬಾಗಿ ನಿಂತವರು. ತಮ್ಮ ದುಡಿಮೆಯ ಬಹುಪಾಲನ್ನು ಸಾಮಾಜಿಕ ಕಾರ್ಯಗಳಿಗೇ ವ್ಯಯಿಸುತ್ತಿದ್ದ ರಾಮಣ್ಣನವರದು ಮಾತೃ ಹೃದಯ. ಜೊತೆಗೆ ತಮ್ಮ ಕತೆಗಳ ಮುಖೇನ ಟೆನೆನ್ಸಿ ಕಾಯ್ದೆ, ಮೀಸಾ ಕಾಯ್ದೆಯಂತಹ ವಿಚಾರಗಳನ್ನು ಜನಸಾಮಾನ್ಯರಿಗೆ ತಿಳಿಹೇಳುತ್ತಾ ಸಾಮಾಜಿಕ ಬದಲಾವಣೆಗೆ, ಸಮ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದವರು ಹಾಗಾಗಿ ಬೆಸಗರಹಳ್ಳಿ ರಾಮಣ್ಣನವರು ಕನ್ನಡ ಸಾರಸ್ವತಲೋಕ ಎಂದೂ ಮರೆಯದ ಅನರ್ಘ್ಯ ರತ್ನ.

**ಪರಾಮರ್ಶನ ಗ್ರಂಥಗಳು**

೧. ಬಿ. ಆರ್. ರವಿಕಾಂತೇಗೌಡ., ಬೆಸಗರಹಳ್ಳಿ ರಾಮಣ್ಣನವರ ಆಯ್ದ ಕಥೆಗಳು., ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೨. ಡಾ. ಬೆಸಗರಹಳ್ಳಿ ರಾಮಣ್ಣ., ಬೆಸಗರಹಳ್ಳಿ ರಾಮಣ್ಣ: ಸಮಗ್ರ ಕಥೆಗಳು., ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.